ಎರಡನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಲಯ
ಬೆಂಗಳೂರು ಗ್ರಾಮಾಂತರ ಜಿಲ್ಲೆ, ಬೆಂಗಳೂರು

ಸ್ಪೆಷಲ್ ಕೇಸ್ ನಂಃ 956/2024

(ಫ್ರಾಸಾ-1 ಚಾಸಾ-1)
ಸಾಕ್ಷಿಗೆ ಪ್ರಮಾಣ ವಚನ ಭೋದಿಸಲಾಯಿತು
ದಿಃ 10.06.2026

| | | |
|---|---|---|
| ಸಾಕ್ಷಿದಾರರ ಹೆಸರು | - | ರಮ್ಯಶ್ರೀ ಜಿ.ಎಂ. |
| ಗಂಡನ ಹೆಸರು | - | ಮುನೇಗೌಡ |
| ವಯಸ್ಸು | - | 32 ವರ್ಷ, |
| ಉದ್ಯೋಗ | - | ಗಾರ್ಮೆಂಟ್ ನಲ್ಲಿ ಕೆಲಸ |
| ವಾಸ | - | ದೊಡ್ಡಬಳ್ಳಾಪುರ |

ಮುಖ್ಯ ವಿಚಾರಣೆಃ ಮಾನ್ಯ ವಿಶೇಷ ಸರ್ಕಾರಿ ಅಭಿಯೋಜಕರಿಂದಃ

ನಾನು ಪರಿಶಿಷ್ಟ ಜಾತಿಗೆ ಸೇರಿದ ಮಾದಿಗ ಸಮುದಾಯಕ್ಕೆ ಸೇರಿದವಳು. ಚಾಸಾ-2 ಮುನೇಗೌಡ ನನ್ನ ಗಂಡ.

2. ಆರೋಪಿತರು ನಮ್ಮ ನೆರೆಹೊರೆಯವರು. ಆರೋಪಿತರು ಒಕ್ಕಲಿಗ ಸಮುದಾಯುಕ್ಕೆ ಸೇರಿದವರು.

3. ದಿಃ12.09.2024 ಕ್ಕಿಂತ ಎರಡು ತಿಂಗಳು ಮೊದಲಿನಿಂದಲೂ 2 ನೇ ಆರೋಪಿ ನನಗೆ, ಪ್ರತಿ ದಿನ ಬೆಳಗ್ಗೆ ಎದ್ದು, ಮಾದಿಗ ಸೂಳೆ ಮುಂಡೇ ನಿನ್ನ ಮುಖ ನೋಡಿದರೆ ನಮಗೆ ಹೋದ ಕೆಲಸ ಆಗುವುದಿಲ್ಲ ಆಗುವುದಿಲ್ಲ ಎಂದು ಅವಮಾನ ಮಾಡಿ ಜಾತಿ ನಿಂದನೆ ಮಾಡುತ್ತಿದ್ದರು. 2 ನೇ ಆರೋಪಿಯು ನನಗೆ, ನೀವು ಕೀಳು ಜಾತಿಯವರು ನಮ್ಮ ನೆರೆಹೊರೆಯವರಾಗಿ ಇರಲು ಯೋಗ್ಯತೆ ಇಲ್ಲ, ಮನೆ ಖಾಲಿ ಮಾಡಿಕೊಂಡು ಹೋಗಿ ಎಂದು ಹೇಳುತ್ತಿದ್ದರು.

4. ನನ್ನ ಗಂಡ ರಾತ್ರಿ ಸಮಯದಲ್ಲಿ ಗಾರ್ಮೆಂಟ್ಸ್ ನಲ್ಲಿ ಕೆಲಸಕ್ಕೆ ಹೋದಾಗ 1 ನೇ ಆರೋಪಿ ನಮ್ಮ ಮನೆಯ ಬಾಗಿಲು ಬಡಿಯುವುದು, ನಾನು ಬಾಗಿಲು ತೆಗೆಯದೇ

ಇದ್ದಾಗ ಅವಾಚ್ಯ ಶಬ್ದಗಳಿಂದ ಬೈಯುತ್ತಿದ್ದರು ಮತ್ತು ನಮ್ಮ ಮನೆಯ ವಿದ್ಯುತ್ ಸಂಪರ್ಕವನ್ನು ಕಡಿತಗೊಳಿಸುತ್ತಿದ್ದರು. ನಮಗೆ ಸೇರಿದ ವಸ್ತುಗಳು ಮನೆಯ ಹೊರಗೆ ಇದ್ದಲ್ಲಿ ಅವುಗಳನ್ನು 1 ನೇ ಆರೋಪಿ ಬಿಸಾಡುತ್ತಿದ್ದನು. 1 ನೇ ಆರೋಪಿಯು ಆತನ ಮನೆಯ ಕಿಟಕಿಯಲ್ಲಿ ನಿಂತುಕೊಂಡು ಆತನ ಮೊಬೈಲ್ ನಿಂದ ಅಶ್ಲೀಲ ವಿಡಿಯೋಗನ್ನು ತೋರಿಸುತ್ತಿದ್ದ.

5. ದಿಃ12.09.2024 ರಂದು ರಾತ್ರಿ 8.00 ಘಂಟೆ ಸಮಯದಲ್ಲಿ ನಾನು ಮತ್ತು ನನ್ನ ಗಂಡ ಚಾಸಾ-2 ಮುನೇಗೌಡ ನಮ್ಮ ಮನೆಯಲ್ಲಿದ್ದಾಗ, ಆರೋಪಿತರು, ನಿಮ್ಮಂತ ಕೀಳು ಜಾತಿಯವರು ನಮ್ಮ ನೆರೆಹೊರೆಯರಾಗಿ ಇರಬಾರದು, ಮೊದಲು ಮನೆ ಖಾಲಿ ಮಾಡಿ, ನಿಮ್ಮನ್ನು ನೋಡಿದರೆ ನಮ್ಮ ಕೆಲಸಗಳು ಆಗುತ್ತಿಲ್ಲ ಎಂದು ಹೇಳಿದರು.

6. ಆರೋಪಿತರು ಆ ರೀತಿ ಹೇಳಿದ್ದನ್ನು ಕೇಳಿಸಿಕೊಂಡು ನಾನು ಮತ್ತು ನನ್ನ ಗಂಡ ಚಾಸಾ-2 ಆರೋಪಿತರನ್ನು ಕೇಳಲು ಮನೆಯಿಂದ ಹೊರಗೆ ಬಂದು ಕೆಳಗೆ ಇಳಿದೆವು. ಆಗ ಆರೋಪಿತರು, ನಿಮ್ಮಂತಹ ಮಾದಿಗ ಸೂಳೆ ಮಕ್ಕಳು ನಮ್ಮನ್ನು ಮುಟ್ಟಿ ಮಾತನಾಡಿಸಲು ಬಂದಿದ್ದೀರಾ ಎಂದು ಬೈದರು.

7. ನನ್ನ ಗಂಡ ಚಾಸಾ-2 ರಿಗೆ ಘಟನೆಯಾಗುವ ಎರಡು ಮೂರು ವರ್ಷದ ಹಿಂದೆ ಅಪಘಾತದಲ್ಲಿ ಬಲಗಾಲು ಮುರಿತವಾಗಿದ್ದು ರಾಡ್ ಅಳವಡಿಸಲಾಗಿದೆ. 1 ನೇ ಆರೋಪಿ ದೇವರಾಜ್ ನನ್ನ ಗಂಡನ ಬಲಗಾಲಿಗೆ ಕಾಲಿನಿಂದ ಒದ್ದಿದ್ದರು. ನನ್ನ ಗಂಡನ ಬಲಗೈಯ ಮಧ್ಯದ ಬೆರಳಿಗೆ ಕಚ್ಚಿದ್ದರು. ಅದರ ಪರಿಣಾಮ ನನ್ನ ಗಂಡನ ಬಲಗೈನ ಮಧ್ಯ ಬೆರಳಿನ ಉಗುರಿಗೆ ಹಾನಿಯಾಗಿರುತ್ತದೆ. ಆರೋಪಿತರು ನನ್ನ ಗಂಡನನ್ನು ಬಗ್ಗಿಸಿ ಕುತ್ತಿಗೆ ಹಿಡಿದು ತಿರುಗಿಸಿದರು.

8. ಘಟನೆಯ ನಂತರ ನಾನು ಮತ್ತು ನನ್ನ ಗಂಡ ದೊಡ್ಡಬಳ್ಳಾಪುರದ ಕಸಬಾ ಪೋಲಿಸ್ ಠಾಣೆಗೆ ಫಿರ್ಯಾದು ಕೊಡಲು ಹೋದೆವು. ಪೋಲಿಸರು ನನ್ನ ಗಂಡನ ಕೈ ಬೆರಳಿನಿಂದ

ರಕ್ತ ಬರುತ್ತಿದ್ದು ನೋಡಿ ಆಸ್ಪತ್ರೆಗೆ ಹೋಗಿ ಚಿಕಿತ್ಸೆ ಪಡೆದುಕೊಂಡು ಬನ್ನಿ ಎಂದು ಹೇಳಿದರು. ಆದ ಕಾರಣ ನಾನು ನನ್ನ ಗಂಡನನ್ನು ದೊಡ್ಡಬಳ್ಳಾಪುರದ ಸರ್ಕಾರಿ ಆಸ್ಪತ್ರೆಗೆ ಕರೆದುಕೊಂಡು ಹೋಗಿ ಚಿಕಿತ್ಸೆ ಕೊಡಿಸಿದೆನು.

9. ದಿಃ14.9.2024 ರಂದು ನಾನು ಪೋಲಿಸ್ ಠಾಣೆಗೆ ಹೋಗಿ ನಿಪಿ-1 ರಂತೆ ಲಿಖಿತ ಫಿರ್ಯಾದು ನೀಡಿದೆ. ನಿಪಿ-1(ಎ) ನನ್ನ ಸಹಿ.

10. ಫಿರ್ಯಾದು ಕೊಟ್ಟ ದಿನ ಸಂಜೆ ಸುಮಾರು 06.30-07.00 ಘಂಟೆಗೆ ಪೋಲಿಸರು ಘಟನೆ ನಡೆದ ಸ್ಥಳಕ್ಕೆ ತನಿಖೆ ಮಾಡಲು ಬಂದಿದ್ದರು. ಪೋಲಿಸರಿಗೆ ನಾನು ಘಟನೆ ನಡೆದ ಸ್ಥಳ ತೋರಿಸಿದೆ. ಆ ಸಮಯ ಸ್ಥಳದಲ್ಲಿ ಚಾಸಾ-3 ಸುಧಾಕರ್ ಮತ್ತು ಚಾಸಾ-5 ಗಣೇಶ್ ಹಾಗೂ ಇತರರು ಇದ್ದರು. ಪೋಲಿಸರು ಸ್ಥಳದಲ್ಲಿ ತನಿಖೆ ಮಾಡಿ ನಿಪಿ-2 ರಂತೆ ಸ್ಥಳ ಪಂಚನಾಮೆ ಮಾಡಿದರು. ನಿಪಿ-2(ಎ) ನನ್ನ ಸಹಿ. ಪೋಲಿಸರು ಸ್ಥಳ ಪಂಚನಾಮೆ ಮಾಡುವ ಸಮಯ ನಿಪಿ-3(1) ಮತ್ತು (2) ಫೋಟೋಗಳನ್ನು ತೆಗೆದುಕೊಂಡರು. ನಿಪಿ-3(1) ಮತ್ತು (2)ರಲ್ಲಿ ನಾನು, ಚಾಸಾ-3 ಸುಧಾಕರ್, ಚಾಸಾ-5 ಗಣೇಶ್ ಹಾಗೂ ಪೋಲಿಸರು ಇದ್ದೇವೆ. ನಿಪಿ-3(1) ಮತ್ತು (2) ರಲ್ಲಿ ಕಾಣುವ ಜಾಗ ನಮ್ಮ ಮನೆಯ ಕೆಳಗೆ ಬರುತ್ತದೆ.

11. ಪೋಲಿಸರು ನನ್ನನ್ನು ದೊಡ್ಡಬಳ್ಳಾಪುರ ನ್ಯಾಯಾಧೀಶರ ಬಳಿ ಕರೆದುಕೊಂಡು ಹೋಗಿದ್ದರು. ನಾನು ನ್ಯಾಯಾಧೀಶರ ಸಮಕ್ಷಮ ಘಟನೆಯ ಬಗ್ಗೆ ನಿಪಿ-4 ರಂತೆ ಹೇಳಿಕೆ ಕೊಟ್ಟಿದ್ದೇನೆ. ನಿಪಿ-4(ಎ) ನನ್ನ ಸಹಿ.

(ಈ ಹಂತದಲ್ಲಿ ಸಾಕ್ಷಿಯನ್ನು ಭಾಗಶಃ ಪ್ರತಿಕೂಲ ಸಾಕ್ಷಿಯಾಗಿ ಪರಿಗಣಿಸಿ ಪಾಟೀ ಸವಾಲಿನಲ್ಲಿ ಕೇಳುವಂತಹ ಪ್ರಶ್ನೆಗಳನ್ನು ಕೇಳಲು ಅನುಮತಿ ನೀಡಲಾಯಿತು)

12. 1 ನೇ ಆರೋಪಿಯು ನನಗೆ ಅಶ್ಲೀಲ ವಿಡಿಯೋಗಳನ್ನು ತೋರಿಸಿ ಕೈಯಿಂದ ಸನ್ನೆ ಮಾಡುತ್ತಿದ್ದರು ಎಂದರೆ ಸರಿ.

**<u>ಪಾಟೀ ಸವಾಲುಃ</u>** ಆರೋಪಿತರ ಪರ ವಕೀಲರು ಸೆಕ್ಷನ್ 231(2) ಸಿ ಆರ್ ಪಿ ಸಿ ಅಡಿಯಲ್ಲಿ ಸಲ್ಲಿಸಿದ ಅರ್ಜಿಯನ್ನು ಮಾನ್ಯ ಮಾಡಿದ ಕಾರಣ ಪಾಟೀ ಸವಾಲಗೆ ಸಮಯಾವಕಾಶ ಕೊಡಲಾಯಿತು.

(ಸಾಕ್ಷಿ ಹೇಳಿದಂತೆ ಹೇಳಿಕೆಯನ್ನು ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದ ಮೇರೆಗೆ ಬೆರಳಚ್ಚು ಮಾಡಿಸಿ ಓದಿ ಹೇಳಿದ್ದು ಸಾಕ್ಷಿ ಸರಿ ಇರುವುದಾಗಿ ಒಪ್ಪಿರುತ್ತಾರೆ ಎಂದು ದೃಡೀಕರಿಸುತ್ತೇನೆ)

ಓ ಹೇ ಸಾ ಸ ಸಹಿ ಮಾಡಿದ್ದಾರೆ,

(ಮೊಹಮ್ಮದ್ ಮುಜೀರ್ ಉಲ್ಲಾ ಸಿ. ಜಿ.)
ಎರಡನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಲಯ
ಬೆಂಗಳೂರು ಗ್ರಾಮಾಂತರ ಜಿಲ್ಲೆ, ಬೆಂಗಳೂರು